**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 21/2019**

| | | |
|---|---|---|
| ಸಾಕ್ಷಿದಾರರ ಹೆಸರು | : ಶಶಿಧರ | *ಪ್ರಮಾಣ ಮಾಡಿದ ದಿನಾಂಕ:* |
| ತಂದೆ ಹೆಸರು | : ನಂಜುಡಪ್ಪ | **13.07.2022** |
| ವಯಸ್ಸು | : 34 ವರ್ಷ | |
| ವೃತ್ತಿ | : ಇಂಜನೀಯರ್ | ಪಿಡಬ್ಲ್ಯೂ : 02 |
| ವಾಸ ಸ್ಥಳ | : ಬೆಂಗಳೂರು | ಸಿಡಬ್ಲ್ಯೂ : 04 |

***ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ:***

**ಮೃತ ಪವಿತ್ರಾಕುಮಾರಿ ನನ್ನ ಸ್ನೇಹಿತಳ ತಾಯಿ. ದಿನಾಂಕ 12.06.2015ರಂದು ಈಕೆ ತೀರಿಕೊಂಡಿದ್ದು ಅವರ ಶವವನ್ನು ಮಿಶನ್ ಆಸ್ಪತ್ರೆಯ ಶವಾಗಾರದಲ್ಲಿ ನೋಡಿರುತ್ತೇನೆ. ಈಕೆ ವಿಷ ಸೇವಿಸಿ ಮೃಪಟ್ಟಿರುವುದಾಗಿ ತಿಳಿಯಿತು. ಪೊಲೀಸರು ಶವ ಮಹಜರ ಬರೆದಿದ್ದು ನಾನು ರುಜು ಮಾಡಿರುತ್ತೇನೆ. ಮಹಜರನ್ನು ನಿಪಿ-2 ಅಂತ ಸಾಕ್ಷಿ ರುಜುವನ್ನು ನಿಪಿ-2(ಎ) ಅಂತ ಗುರುತಿಸಿದೆ. ಚಾಸಾ-3 ಮತ್ತು 5ರವರು ಸಹ ಮಹಜರಗೆ ರುಜು ಮಾಡಿರುತ್ತಾರೆ. ಈಕೆ ವೇದಾವತಿ ಎನ್ನುವವರ ಕಡೆ ಸಾಲ ಮಾಡಿದ್ದು ಇದೇ ವಿಚಾರದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿಯಿತು.**

**ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಎ.ಜಿ.ಎಸ್.ರವರಿಂದ:-**

**2. ಮೃತಳಿಗೂ ಆರೋಪಿಗೂ ಇದ್ದ ವ್ಯವಹಾರಗಳ ಬಗ್ಗೆ ನನಗೆ ಖುದ್ದಾಗಿ ಗೊತ್ತಿಲ್ಲ. ಮೃತಳ ಮಗಳ ಕಡೆಯಿಂದ ಈ ವಿಚಾರ ತಿಳಿದುಕೊಂಡಿದ್ದೆ. ಮೃತಳಿಗೂ ಆರೋಪಿಗೂ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ ಎನ್ನುವುದು ಸರಿಯಲ್ಲ. ಈ ಬಗ್ಗೆ ಯಾವುದೇ**

ದಾಖಲೆಗಳನ್ನು ನಾನು ನೋಡಿಲ್ಲ. ಮೃತನ ಮಗಳು ಮತ್ತು ನಾನು ಸ್ನೇಹಿತರು. ಈಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೋನಿಕಾ ನನ್ನ ಸಹಪಾಠಿ.

ಮರು ವಿಚಾರಣೆ:- - ಇಲ್ಲ -

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

ಓ ಹೇ ಕೇ ಸ ಇ ಎ ಒ.,

**13.07.2022.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.